**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪೊನ್ನಂಪೇಟೆ.**

**ಸಿ.ಸಿ. ನಂ. 921/2020** **ಫ್ರಾ.ಸಾ –4**
**ಚಾ.ಸಾ – 2**

**ದಿನಾಂಕಃ 30.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಶಿವಕುಮಾರ್ |
| ತಂದೆಯ ಹೆಸರು | : | ಜಯ ಎಂ ಕೆ |
| ವಯಸ್ಸು | : | 36 ವರ್ಷ |
| ಉದ್ಯೋಗ | : | ಅರಣ್ಯ ವೀಕ್ಷಕರು |
| ವಾಸ ಸ್ಥಳ | : | ಬಾಳೆಲೆ |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ನಾನು ಕಳೆದ 8 ವರ್ಷಗಳಿಂದ ಮತ್ತಿಗೋಡು ಆನೆ ಶಿಬಿರದಲ್ಲಿ ಅರಣ್ಯ ವೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ. 28.04.2020 ರಂದು ರಾತ್ರಿ ಗಸ್ತಿನಲ್ಲಿದ್ದಾಗ ಆರೋಪಿತರು ಕಾಡಿನಿಂದ ಬರುತ್ತಿದ್ದು ಅವರ ಕೈಯಲ್ಲಿ ಒಂದು ಬ್ಯಾಗ್ ಇದ್ದು ಅವರನ್ನು ವಿಚಾರಿಸಿದಾಗ ಬ್ಯಾಗ್‌ನ ಒಳಗಡೆ ನೀರಿನಂತೆ ದ್ರವವಿದ್ದು ಅದನ್ನು ಪರಿಶೀಲಿಸಿದಾಗ ದುರ್ವಾಸನೆಯಿಂದ ಕೂಡಿರುತ್ತದೆ. ನಂತರ ಅವರ ಹೆಸರು ವಿಳಾಸ ಕೇಳಿಕೊಂಡೆವು. ಅದನ್ನು ಸಾರಾಯಿ ಎಂದು ಹೇಳಿದರು. ನಂತರ ಅಬಕಾರಿ ಇಲಾಖೆ ಮತ್ತು ಮೇಲಾದಿಕಾರಿಗಳಿಗೆ ವಿಚಾರ ತಿಳಿಸಿರುತ್ತೇವೆ. ಅಬಕಾರಿ ಇಲಾಖೆಯವರು ಬಂದು ಮುಂದಿನ ಕ್ರಮ ಕೈ ಗೊಂಡರು.

(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ, ಮಾನ್ಯ ಎಪಿಪಿರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)

<u>ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-</u>

ಅಬಕಾರಿ ಇಲಾಖೆಯವರು ಕೂಡಲೇ ಕೃತ್ಯ ಸ್ಥಳಕ್ಕೆ ಬಂದರು ಎಂದರೆ ಸರಿ. ಆ ಸಮಯದಲ್ಲಿ 1 ನೇ ಆರೋಪಿ ಕೈ ಯಲ್ಲಿ ಬ್ಯಾಗ್ ಇತ್ತು ಎಂದರೆ ಸರಿ. 2 ನೇ ಆರೋಪಿ ಕೂಡ 1 ನೇ ಆರೋಪಿ ಜೊತೆ ಇದ್ದರು ಎಂದರೆ ಸರಿ. ಆ ಸಮಯದಲ್ಲಿ ಅಬಕಾರಿ ಇಲಾಖೆಯವರು ನಮ್ಮ ಸಮಕ್ಷಮ ಬ್ಯಾಗ್ ಅನ್ನು ಪರಿಶೀಲಿಸಿದರು ಎಂದರೆ ಸರಿ. ಆ ವೇಳೆ ನನ್ನನ್ನು ಮತ್ತು ಚಾಸಾ 1 ರವರನ್ನು ಪಂಚರಾಗಲು ಕೋರಿದರು ಎಂದರೆ ಸರಿ. ನಮ್ಮ ಸಮಕ್ಷಮ ಶೋಧನೆ ಮಾಡಿದಾಗ 5 ಲೀ ಕಳ್ಳಬಟ್ಟಿ ಸಾರಾಯಿ ಇತ್ತು ಎಂದರೆ ಸರಿ. ಇದರ ಬಗ್ಗೆ ಪರವಾನಗಿ ಕೇಳಲಾಗಿ ಇಲ್ಲ ಎಂದು ತಿಳಿಸಿದ್ದು ಹೆಚ್ಚಿನ ಬೆಲೆಗೆ ಮಾರಾಟಮಾಡಲು ಇಟ್ಟುಕೊಂಡಿರುವುದಾಗಿ ತಿಳಿಸಿದರು ಎಂದರೆ ಸರಿ.

5 ಲೀ ನಲ್ಲಿ 1 ಲೀ ನಷ್ಟು ಪ್ರತ್ಯೇಕವಾಗಿ FSL ಗೆ ತೆಗೆದುಕೊಂಡರು ಎಂದರೆ ಸರಿ. ಸ್ಥಳದಲ್ಲಿ ಅನ್ನು 07.30 ರಿಂದ 09.00 ಗಂಟೆ ತನಕ ಇಲಾಖಾ ಜೀಪಿನ ಹೆಡ್ ಲೈಟ್ ಮುಖಾಂತರ ಮಹಜರ್ ಕ್ರಮ ಮಾಡಿ ನನ್ನ ಸಹಿ ಪಡೆದರು ಎಂದರೆ ಸರಿ ನಿ ಪಿ 1 ಮಹಜರ್ ನಲ್ಲಿ ಸಹಿ ನೋಡಿ ಗುರುತಿಸಿದ್ದು ಸಹಿಯನ್ನು ನಿಪಿ 1(ಸಿ) ಎಂದು ಗುರುತಿಸಲಾಯಿತು. ನಿ ಪಿ 2 ಮತ್ತು 3 ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಮು. ಮಾ 1 ರಿಂದ 3 ಅನ್ನು ಹಾಗೂ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀಮತಿ ಡಿ. ಆರ್. ಜೆ ವಕೀಲರಿಂದಃ</u>

ಗಸ್ತು ಮಾಡುವ ಸ್ಥಳದಲ್ಲೇ ಆರೋಪಿತರು ಸಿಕ್ಕಿದ್ದರು. ಈ ಸ್ಥಳದಿಂದ ಮುಖ್ಯ ರಸ್ತೆ 4 ರಿಂದ 5 ಕಿ. ಮೀ ದೂರ. ಆರೋಪಿಗಳು ಸಿಕ್ಕಿದ ಸ್ಥಳ ಅರಣ್ಯ ಪ್ರದೇಶ. ಆಯಿರ ಸುಳಿ ರಸ್ತೆಯಲ್ಲಿ ವಾಹನಗಳು ಓಡಾಡುತ್ತವೆ ಎಂದರೆ ಸರಿ. ಆಯಿರ ಸುಳಿ ಸ್ಥಳದಲ್ಲಿ ಆದಿನ ಆರೋಪಿಗಳನ್ನು ಬಿಟ್ಟರೆ ಸಾರ್ವಜನಿಕರು ಮತ್ತು ಮದ್ಯ ಸೇವನೆಯ ಗ್ರಾಹಕರು ಯಾರು ಇರಲಿಲ್ಲ. ಆಯಿರ ಸುಳಿ ಪಕ್ಕದಲ್ಲಿ ಹಾಡಿ ಜನರ ಮನೆಗಳಿವೆ ಎಂದರೆ ಸರಿ. ಮು. ಮಾ 2

Sunflower ಅಡಿಗೆ ಎಣ್ಣೆಯ ಪ್ಲಾಸ್ಟಿಕ್ ಬಾಟಲ್ ಎಂದರೆ ಸರಿ. ಇದೇ ಸ್ಥಳದಲ್ಲಿ ಅರುಣ್ ಮಾಚಯ್ಯ ಮತ್ತು ಸ್ವಾಮಿರವರ ಕಾಫಿ ತೋಟ ಮತ್ತು ಲೈನ್ ಮನೆಗಳಿವೆ ಎಂದರೆ ಸರಿ. ಕೃತ್ಯ ಸ್ಥಳದಲ್ಲಿ ಫೋಟೋ ತೆಗೆದರು. ಸಾಕ್ಷಿಗೆ ಫೋಟೋಗಳನ್ನು ತೋರಿಸಿದ್ದು ಕಚೇರಿಯಲ್ಲಿ ತೆಗೆದದ್ದು ಎಂದು ಒಪ್ಪಿಕೊಳ್ಳುತ್ತಾರೆ. ಮು. ಮಾ 1 ಬ್ಯಾಸ್ಕೆಟ್ ಹಾಡಿ ಜನಗಳಿಗೆ ಸೇರಿದ್ದು ಎಂದರೆ ಸಾಮಾನ್ಯವಾಗಿ ಅವರ ಮನೆಯಲ್ಲಿ ಇರುತ್ತದೆ ಎಂದರೆ ಸರಿ. ಈ ಪ್ರಕರಣಕ್ಕೂ, ಮು ಮಾ ಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಮಹಜರ್ ನನ್ನ ಸಮಕ್ಷಮ ಆಗಿಲ್ಲ ಎಂದರೆ ಸರಿಯಲ್ಲ. ಕಚೇರಿಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸ್ಥಳಕ್ಕೆ ನಾವು ಹೋಗಿಲ್ಲ ಆದ್ದರಿಂದ ಸ್ಥಳದ ಫೋಟೋಗಳು ಇಲ್ಲ ಎಂದರೆ ಸರಿಯಲ್ಲ. ಆ ದಿನ ಮು ಮಾ ಗಳನ್ನು ನನ್ನ ಸಮಕ್ಷಮ ವಶಕ್ಕೆ ಪಡೆಯಲಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ಯಾವುದೇ ಕೃತ್ಯ ಮಾಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/-

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ